**ದಿ: 13-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

(ವಾದಿಯರು ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

**ಪಾಟೀ ಸವಾಲು: ಶ್ರೀ ಪಿ ಎಸ್ ಎನ್ ವಕೀಲರಿಂದ** ಪ್ರತಿವಾದಿ 2 ರ ವಾರಸುದಾರರ ಪರವಾಗಿ:

ನಾನು ಕನ್ನಡ 5 ನೇ ತರಗತಿಯವರೆಗೆ ಓದಿದ್ದೇನೆ. ವಾದಿಯರು ನನ್ನ ಮಕ್ಕಳು. ವಾದಿಯರ ಮತ್ತು ನನ್ನ ಸಂಬಂಧ ಚನ್ನಾಗಿದೆ. ಈ ದಾವೆಯನ್ನು ನನ್ನ ಮಕ್ಕಳು ಮತ್ತು ನಾನು ಎಲ್ಲರೂ ಸೇರಿ ಮಾಡಿದ್ದೇವೆ. ದಾವಾ ಆಸ್ತಿ ಹೊರತು ಪಡಿಸಿ ನಮ್ಮ ಮನೆತನಕ್ಕೆ ಇನ್ನು ಸಾಕಷ್ಟು ಆಸ್ತಿಗಳು ಇವೆ ಎಂದರೆ ಸರಿ. ಆ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಸರ್ವೆ ನಂಬರ ಗೊತ್ತಿದೆ. ನಮ್ಮ ಮನೆತನದ ಪೂರ್ವಜರ ಹೆಸರು ಮತ್ತು ನಮ್ಮ ವಂಶಾವಳಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಅಜ್ಜನ ಹೆಸರು ನಾರಾಯಣರಾವ್ ದೇಸಾಯಿ, ನನ್ನ ಮುತ್ತಜ್ಜನ ಹೆಸರು ಗೊತ್ತಿಲ್ಲ. ನಮ್ಮ ಘರಾಣೆದ ಮೂಲ ಪುರುಷನ ತಿಮ್ಮಾಜಿ ದೇಸಾಯಿ ಎಂದರೆ ಸರಿ. ತಿಮ್ಮಾಜಿರವರ ಹೆಂಡತಿ ಹೆಸರು ರಮಾಬಾಯಿ ಎಂದರೆ ಸರಿ. ತಿಮ್ಮಾಜಿ ಮತ್ತು ರಮಾಬಾಯಿ ಅವರಿಗೆ ಮಕ್ಕಳಿಲ್ಲದ ಕಾರಣ ಅವರು ನಮ್ಮ ಅಜ್ಜ ನಾರಾಯಣರಾವ್ ದೇಸಾಯಿಯವರನ್ನು ದತ್ತಕ ಪಡೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾರಾಯಣರಾವ್ ದೇಸಾಯಿ ತಿಮ್ಮಾಜಿ ದೇಸಾಯಿಯವರ ಖಾಸ ಮಗ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಕೊನೆಯ ಹಕ್ಕುದಾರರು ರಮಾಬಾಯಿ ಎಂದರೆ ಸರಿ. 1861 ರ ದಾವಾ ಆಸ್ತಿ ವಿವಾದದಲ್ಲಿದ್ದು 1861 ರಲ್ಲಿ ಕೋರ್ಟ ಡಿಕ್ರಿ ಪ್ರಕಾರ ರಮಾಬಾಯಿ ಮಾಲೀಕರಾದರು ಎಂದರೆ ಸರಿಯಲ್ಲ. 1870 ರಲ್ಲಿ ರಮಾಬಾಯಿ ದೇಸಾಯಿಯವರು ದಾವಾ ಆಸ್ತಿಯನ್ನು ಮದ್ವಾಚಾರ್ಯ ಗುಡಿ ಇವರ ಪೂರ್ವಜರಿಗೆ ಭಕ್ಷಿಸ ಮಾಡಿದರು ಎಂದರೆ ಸರಿಯಲ್ಲ. 1870 ರಿಂದ ಮದ್ವಾಚಾರ್ಯ ಗುಡಿ ಇವರ ಪೂರ್ವಜರ ಹೆಸರು, ನಂತರ ಮದ್ವಾಚಾರ್ಯರ ಹೆಸರು ಆನಂತರ ಹನಮಂತಾಚಾರ್ಯರ ಹೆಸರು, ಆ ನಂತರ ಪ್ರತಿವಾದಿ 2 ಮತ್ತು ಅವರ ವಾರಸುದಾರರ ಹೆಸರು ದಾವಾ ಆಸ್ತಿಗಳಿಗೆ ದಾಖಲಾದವು ಎಂದರೆ ಸರಿಯಲ್ಲ. 1861 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಏನೇನು ಆಗಿದೆ ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ನಮ್ಮ ಮುತ್ತಜ್ಜಿ ರಮಾಬಾಯಿ 1898 ರಲ್ಲಿ ತೀರಿಕೊಂಡರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ವಿಠೋಭಾ ದೇವಸ್ಥಾನದಲ್ಲಿ ದೀಪ ಹಚ್ಚುವ ಸಲುವಾಗಿ ರಮಾಬಾಯಿ ಇವರು ಮದ್ವಾಚಾರ್ಯ ಗುಡಿ ಇವರ ಪೂರ್ವಜರಿಗೆ ಭಕ್ಷಿಸ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ವಿಠೋಭಾ ದೇವಸ್ಥಾನದಲ್ಲಿ ದೀಪ ಹಚ್ಚುವ ಸಲುವಾಗಿ ದಾವಾ

ಆಸ್ತಿಯನ್ನು ನಮ್ಮ ತಂದೆ ಗುಡಿ ಕುಟುಂಬದವರಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಂದೆ ಗುಡಿ ಕುಟುಂಬದವರಿಗೆ ದಾವಾ ಆಸ್ತಿಯನ್ನು ನೀಡಿದ ದಿನಾಂಕ, ಇಸ್ವಿ ಗೊತ್ತಿಲ್ಲ.

ರಮಾಬಾಯಿ ದೇಸಾಯಿಯವರು 1872 ರಲ್ಲಿ ಮದ್ವಾಚಾರ್ಯ ಗುಡಿ ಇವರ ಪೂರ್ವಜರಿಗೆ ಮಾಡಿದ ಭಕ್ಷಿಸ ಪತ್ರವನ್ನು ಇದುವರೆಗೆ ನಾವಾಗಲಿ, ನಮ್ಮ ಪೂರ್ವಜರಾಗಲಿ ಪ್ರಶ್ನಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಅಜ್ಜ ನಾರಾಯಣರಾವ್ ದೇಸಾಯಿರವರು 1930 ರಲ್ಲಿ ಡೆಪ್ಯೂಟಿಕಮೀಷನರವರಿಗೆ ದಾವಾ ಆಸ್ತಿ ಕಬ್ಜಾ ವಾಪಸ್ಸ ಕೊಡಿಸುವಂತೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಆಗ ಜಿಲ್ಲಾಧಿಕಾರಿಗಳು ಸಿವಿಲ್ ನ್ಯಾಯಾಲಯವನ್ನು ಸಂಪರ್ಕಿಸುವಂತೆ ಆದೇಶಿಸಿ ನಮ್ಮ ಅಜ್ಜ ನಾರಾಯಣರಾವ್ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದರು ಎಂದರೆ ಸರಿ. ಆ ನಂತರ ನಮ್ಮ ಅಜ್ಜ ನಾರಾಯಣರಾವ್ ದೇಸಾಯಿಯವರಾಗಲಿ ಅವರ ವಾರಸುದಾರರಾಗಲಿ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸಿವಿಲ್ ನ್ಯಾಯಾಲಯದಲ್ಲಿ ಯಾವುದೆ ದಾವೆ ಹೂಡಿಲ್ಲ ಎಂದರೆ ಗೊತ್ತಿಲ್ಲ. ನಂತರ 1956 ರಲ್ಲಿ ನಮ್ಮ ತಂದೆ ಮತ್ತೊಮ್ಮೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ದಾವಾ ಆಸ್ತಿ ಕಬ್ಜಾಕೊಡಿಸುವಂತೆ ಕೇಳಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿ ಪ್ರಕಾರ ವಿಚಾರಣೆ ಮಾಡುವಂತೆ ಜಿಲ್ಲಾಧಿಕಾರಿಗಳು ತಹಶೀಲ್ದಾರ ಕಲಘಟಗಿ ಇವರಿಗೆ ಸೂಚಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಆದೇಶವನ್ನು ಮದ್ವಾಚಾರ್ಯ ಗುಡಿ ಇವರು ಬಾಂಬೆ ರೆವಿನ್ಯೂ ಕೋರ್ಟನಲ್ಲಿ ಪ್ರಶ್ನಿಸಿದ್ದರು ಎಂದರೆ ಗೊತ್ತಿಲ್ಲ. ನಾರಾಯಣರಾವ್ ದೇಸಾಯಿಯವರಾಗಲಿ, ನಮ್ಮ ತಂದೆ ಕೃಷ್ಣಾರಾವ್ ದೇಸಾಯಿಯವರಾಗಲಿ ಇಲ್ಲಿಯವರೆಗೆ ದಾವಾ ಆಸ್ತಿಯ ಕಬ್ಜಾವನ್ನು ಕೇಳಿಲ್ಲ ಎಂದರೆ ಸರಿ. 1870 ರಿಂದ ಇಲ್ಲಿಯವರೆಗೆ ಮದ್ವಾಚಾರ್ಯ ಗುಡಿರವರ ಪೂರ್ವಜರು ಮತ್ತು ಅವರ ವಾರಸುದಾರರ ಹೆಸರಿನಲ್ಲಿ ಕಾಲ ಕಾಲಕ್ಕೆ ಆಗುತ್ತಾ ಬಂದಿರುವ ಮ್ಯುಟೇಷನಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿ ವಿಚಾರವಾಗಿ ನಾನೆ ಮೊದಲ ಬಾರಿಗೆ ಓ ಎಸ್ ನಂ 123/16 ದಾವೆ ದಾಖಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನೆ ದಾವಾ ಆಸ್ತಿ ಮಾಲೀಕನಾಗಿದ್ದು ಅದನ್ನು ವಾಪಸ್ಸ ಕೊಡಿಸಬೇಕೆಂದು ಪರಿಹಾರ ಕೇಳಿದ್ದೆ. ಸದರಿ ದಾವೆ ವಜಾ ಆಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ವಜಾ ಆದ ಬಗ್ಗೆ ನಮ್ಮ ವಕೀಲರು ನಮಗೆ ತಿಳಿಸಿಲ್ಲ ಹಾಗಾಗಿ ಅದು ಮುಗಿದ ಹೋದ ಕತೆ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿನ ವಾದ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಓ ಎಸ್ ನಂ 123/2016 ರ ಬಗ್ಗೆ ತಿಳಿದುಕೊಂಡಿದ್ದೇವೆ ಎಂದು ಬರೆಸಿದ್ದೇವೆ. ದಾವಾ ಆಸ್ತಿಯನ್ನು ನಮ್ಮ ಮುತ್ತಜ್ಜಿ ರಾಮಾಬಾಯಿ ಮದ್ವಾಚಾರ್ಯ ಗುಡಿ ಇವರ ಪೂರ್ವಜರಿಗೆ ಭಕ್ಷಿಸ ಮಾಡಿದ ನಂತರ ದಾವಾ ಆಸ್ತಿಯಲ್ಲಿ ನಮ್ಮ ಪೂರ್ವಜರ ಹಾಗೂ ನಮ್ಮ ಹಕ್ಕು ನಷ್ಟಗೊಂಡಿದೆ ಎಂದರೆ ಗೊತ್ತಿಲ್ಲ. ಅದೇ ಕಾರಣಕ್ಕಾಗಿ ನನ್ನ ತಂದೆ ಮತ್ತು ನನ್ನ ತಾತ ದಾವಾ ಆಸ್ತಿ ವಿಚಾರವಾಗಿ ಯಾವುದೆ ದಾವೆ ಅಥವಾ ಮಾಗಣಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ಘರಾಣೆದ ಆಸ್ತಿ ಅಲ್ಲದ್ದರಿಂದ ದಾವಾ ಆಸ್ತಿಯಲ್ಲಿ ವಾದಿಯರಿಗಾಗಲಿ, ನನಗಾಗಲಿ ಪಾಲು ಕೇಳುವ ಹಕ್ಕು

ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಿಚಾರವಾಗಿ ನಮ್ಮ ಪೂರ್ವಜರು ಸಲ್ಲಿಸಿದ ಎಲ್ಲಾ ಅರ್ಜಿ ಹಾಗೂ ಪ್ರಕರಣಗಳು ನಮ್ಮ ವಿರುದ್ಧ ತೀರ್ಮಾನ ಆದ ವಿಚಾರ ಗೊತ್ತಿದ್ದರೂ ಸಹ ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1970 ರಿಂದ ಇಲ್ಲಿಯವರೆಗೆ ಮದ್ವಾಚಾರ್ಯರ ಪೂರ್ವಜರು, ನಂತರ ಮದ್ವಾಚಾರ್ಯರು ಮತ್ತು ಅವರ ನಂತರ ಅವರ ವಾರಸುದಾರರು ವಿಠೋಬಾ ದೇವಸ್ಥಾನದಲ್ಲಿ ದೀಪ ಹಚ್ಚಿಕೊಂಡು, ದಾವಾ ಆಸ್ತಿಗೆ ಮಾಲೀಕರಾಗಿದ್ದು ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ.

1973 ರಲ್ಲಿ ಮದ್ವಾಚಾರ್ಯ ಗುಡಿ ಇವರು ಹನಮಂತಾಚಾರ್ಯ ಗುಡಿ ಇವರಿಗೆ ದಾವಾ ಆಸ್ತಿಯ ಬಗ್ಗೆ ನೋಂದಾಯಿತ ಹಕ್ಕುಬಿಟ್ಟ ಪತ್ರ ಮಾಡಿದ್ದಾರೆ ಎಂದರೆ ಸರಿ. ಸದರಿ ಹಕ್ಕುಬಿಟ್ಟ ಪತ್ರವನ್ನು ನಮ್ಮ ಅಜ್ಜನಾಗಲಿ, ನಮ್ಮ ತಂದೆಯಾಗಲಿ ಮತ್ತು ನಾನಾಗಲಿ ಪ್ರಶ್ನಿಸಿಲ್ಲ ಎಂದರೆ ಆ ಬಗ್ಗೆ ನಮಗೆ ಗೊತ್ತೆ ಇರಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ದೇವಸ್ಥಾನದಲ್ಲಿ ದೀಪ ಹಚ್ಚುವ ಸಲುವಾಗಿ ಗುಡಿ ಮನೆತನದವರಿಗೆ ನೀಡಿರುವುದಾಗಿ 2005 ನೇ ಇಸ್ವಿಯಲ್ಲಿ ನನ್ನ ತಾಯಿ ನನಗೆ ಹೇಳಿದ್ದರು. ಆ ಕೂಡಲೆ ನಾವು ಯಾವುದೆ ದಾವೆ ಹೂಡಿಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾಯಿ ತೀರಿಕೊಂಡರು ಮತ್ತು ನನಗೆ ಆರೋಗ್ಯ ಸರಿ ಇಲ್ಲದ ಕಾರಣ ದಾವೆ ಹೂಡಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ನಮ್ಮ ಮುತ್ತಜ್ಜಿ ಕಾಲದಲ್ಲಿ ಭಕ್ಷಿಸ ಮಾಡಿದ ವಿಚಾರ ಗೊತ್ತಿರುವ ಕಾರಣದಿಂದಲೆ ನಾನು ದಾವೆ ಹೂಡಲಿಲ್ಲ ಎಂದರೆ ಸರಿಯಲ್ಲ. 1943 ರಲ್ಲಿ ಆದ ಎಂ ಇ ನಂ 675 ಬಗ್ಗೆ ನಮ್ಮ ತಂದೆಗೆ ಮತ್ತು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ 2 ರ ಮರಣಾನಂತರ ದಾವಾ ಆಸ್ತಿಯಲ್ಲಿ ಅವರ ವಾರಸುದಾರರು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಾಟ್ನಿ ಪ್ರಕಾರ ಅವರ ಹೆಸರುಗಳು ಮಾಲೀಕರು ಮತ್ತು ಕಬ್ಜೆದಾರರು ಅಂತಾ ದಾಖಲಾಗಿವೆ ಎಂದರೆ ಸರಿ. ನಿಡಿ-1 ರಿಂದ 23 ದಾಖಲೆಗಳು ಪ್ರತಿವಾದಿ 2 ಮತ್ತು ಅವರ ವಾರಸುದಾರರ ಪರವಾಗಿ ಇವೆ ಎಂದರೆ ಸರಿಯಲ್ಲ. ದಾವೆ ಮಾಡುವ ಕಾಲಕ್ಕಾಗಲಿ ಅದಕ್ಕೂ ಮೊದಲಾಗಲಿ ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಸೇರಿದ ಬಗ್ಗೆ ದಾಖಲೆಗಳಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಕೃಷ್ಣರಾವ್ ರವರಿಗೆ ಇಬ್ಬರು ಹೆಂಡಂದಿರು ಇದ್ದರು. ನಮ್ಮ ತಂದೆಯ ಮೊದಲೆ ಹೆಂಡತಿಗೆ ಬಾಪು, ಯಶವಂತ, ಮುರಾರಿ 3 ಜನ ಗಂಡು ಮಕ್ಕಳಿದ್ದರು. ನಾನು ಹಾಗೂ ಶ್ರೀನಿವಾಸ 2ನೇ ಹೆಂಡತಿ ಮಕ್ಕಳು ಎಂದರೆ ಸರಿ. ನಮ್ಮ ತಂದೆಗೆ 3 ಜನ ಹೆಂಡತಿಯರು ಇದ್ದರು ಎಂದರೆ ಗೊತ್ತಿಲ್ಲ. ನಮ್ಮ ತಂದೆಯ ಉಳಿದ ವಾರಸುದಾರರನ್ನು ಈ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. 1870 ರಲ್ಲಿಯೇ ದಾವಾ ಆಸ್ತಿ ಗುಡಿ ಕುಟುಂಬಕ್ಕೆ ಹೋಗಿದ್ದರಿಂದ ನಮ್ಮ ಕುಟುಂಬದಲ್ಲಿ ಆದ ವಾಟ್ನಿಯಲ್ಲಿ ದಾವಾ ಆಸ್ತಿ ಬರುವ ಪ್ರಸಂಗವೇ ಬಂದಿಲ್ಲ ಎಂದರೆ ಗೊತ್ತಿಲ್ಲ. ನಾನೆ ವಾದಿಯಾಗಿ ಸೇರಿಕೊಂಡರೆ ಎಲಾಲ ವಿಷಯ ಗೊತ್ತಾಗಿ ಸತ್ಯಹೊರಬರುತ್ತದೆ ಎಂಬ ಉದ್ದೇಶದಿಂದ ನನ್ನ ಮಕ್ಕಳನ್ನು ಮುಂದೆ ಮಾಡಿ ನಿಜವಿಷಯ ಬಚ್ಚಿಟ್ಟು ಸುಳ್ಳು ದಾವೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. 1957 ರಲ್ಲಿಯೇ ಆರ್ ಡಿ ಸಿ ನಂ 8/1957 ರ ಪ್ರಕಾರ ದಾವಾ ಆಸ್ತಿ ವಿಚಾರವಾಗಿ ನಮ್ಮ ಪೂರ್ವಜರು ಹಾಗೂ

ಮದ್ವಾಚಾರ್ಯ ಗುಡಿ ಇವರ ಮಧ್ಯ ಇರುವ ಮಾಗಣಿ ನಿಷ್ಫಲಗೊಂಡಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಪಾಲು ವಾಟ್ನಿಯಲ್ಲಿ ನಮ್ಮ ತಂದೆಯ ಪಾಲಿಗೆ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು ಅವರ ವಾರಸುದಾರರು ಏನೇನು ದಾಖಲೆಗಳನ್ನು ಹಾಜರ ಪಡಿಸಿದ್ದಾರೆ ಎಂದು ನಾನು ನೋಡಿಲ್ಲ. ನಾನು ಕಳೆದ 2 ವರ್ಷದಿಂದ ಗೋವಾದಲ್ಲಿ ವಾಸವಾಗಿದ್ದೇನೆ. 1870 ರಿಂದ ಇಲ್ಲಿಯವರೆಗೆ ಪ್ರತಿವಾದಿ 2 ರ ಪೂರ್ವಜರು ಮತ್ತು ಅವರ ವಾರಸುದಾರರು ದಾವಾ ಆಸ್ತಿಯಲ್ಲಿ ಮಾಲೀಕರಾಗಿದ್ದು ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗಾಗಲಿ ನನಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು ಅವರ ವಾರಸುದಾರರಿಂದ ದಾವಾ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ವಾದಿಯರಿಂದ ಸುಳ್ಳು ದಾವೆ ಮಾಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.